ಎಂ.ವಿ.ಸಿ. ನಂಃ 403/**2024, P.W.-1**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕಃ 27.04.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ ಃ** ಅರ್ಜಿದಾರರ ಪರ **ವಕೀಲರಿಂದಃ**

**ನಾನು ಪ್ರ.ವ.ವರದಿ, ದೂರು, ಪಂಚನಾಮೆ, ಕರಡು ನಕಾಶೆ, ಐ ಎಮ್ ವಿ ವರದಿ, ಎಐಆರ ರಜಿಷ್ಟರ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್‌ನ ಯಥಾನಕಲುಗಳು, ಡಿಸ್ಚಾರ್ಜ ಸಮರಿ, ಡಿಸ್ಚಾರ್ಜ ಕಾರ್ಡ್ ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 13 ಎಂದು ಗುರುತಿಸಲಾಯಿತು.**

**ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.**

ಪಾಟೀ ಸವಾಲು ಃ **2**ನೇ ಎದುರುದಾರರ ಪರಃ ಶ್ರೀ ಎಸ್ ಪಿ ಕೆ ವಕೀಲರಿಂದಃ

ಅಪಘಾತ ಸಮಯದಲ್ಲಿ ನನ್ನ ಜೊತೆ ಯಾರೂ ಇರಲಿಲ್ಲ. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಪೋಲಿಸರು ಅಪಘಾತ ಸಂಬಂಧಿತವಾಗಿ ಪುತ್ತೂರಿನ ಆದರ್ಶ ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿದ್ದಾರೆ. ನನಗೆ ಬರೆಯಲು ಮತ್ತು ಓದಲು ಬರೆಯುವುದಿಲ್ಲ. ನಾನು ಪೋಲಿಸರಿಗೆ ಬರೆದ ಒಂದು ಹೇಳಿಕೆಗೆ ಸಹಿ ಮಾತ್ರ ಮಾಡಿದ್ದೇನೆ ಅದರಲ್ಲಿ ಏನು ಬರೆದಿದೆ ಎಂದು ನನಗೆ ಓದಲು ಬಾರದ ಕಾರಣ ಗೊತ್ತಿಲ್ಲ.

ನಾನು ರಸ್ತೆ ದಾಟುವಾಗ ಬೈಕು ಬಂದು ಗುದ್ದಿದ ಕಾರಣ ಅಪಘಾತ ಆಗಿದೆ. ನಾನು ಬೈಕ ಬರುವುದನ್ನು ಗಮನಿಸಿದ್ದೇನು. ಬೈಕು ಪುತ್ತೂರು ಕಡೆಯಿಂದ ಬರುತ್ತಿತ್ತು. ಬೈಕ್ ಯಾವ ನಮೂನೆಯದ್ದು ಮತ್ತು ಅದರ ನಂಬರ ನನಗೆಗೊತ್ತಿಲ್ಲ. ನಾನು ಗಡಿಬಿಡಿಯಲ್ಲಿ ರಸ್ತೆ ದಾಟುವಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಯಾವುದೇ ಬೈಕಬಂದು ನನಗೆ ಡಿಕ್ಕಿಪಡಿಸಿಲ್ಲ ಎಂದರೆ ಸುಳ್ಳು.

ನನಗೆ ಸಣ್ಣ ಪುಟ್ಟ ಗಾಯಗಳು ಮಾತ್ರ ಆಗಿವೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ 3 ದಿನಗಳ ಕಾಲ ಒಳೆರೋಗಿಯಾಗಿ ದಾಖಲಾಗಿ ಚಿಕಿತೆ ಪಡೆದಿದ್ದೇನೆ.

ನಾನು ಯಾವುದೇ ಆಸ್ಪತ್ರೆಯಲ್ಲಿ ಅಪಘಾತ ಸಂಬಂಧಿತ ಗಾಯಗಳಿಗಾಗಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಮತ್ತು ನನಗೆ ಯಾವುದೆ ವೈದ್ಯಕೀಯ ಖರ್ಚುಗಳು ಆಗಿಲ್ಲ ಎಂದರೆ ಸರಿಯಲ್ಲ. ನಾನು ಗೇರು ಬೀಜದ ಫ್ಯಾಕ್ಟರಿಗೆ ಅಪಘಾತ ಪೂರ್ವ ಕೆಲಸಕ್ಕೆ ಹೋಗುತ್ತಿದ್ದೆ ಈಗ ಹೋಗುತ್ತಿಲ್ಲ. ನಾನು ಹೋಗುತ್ತಿದ್ದ ಗೇರು ಬೀಜದ ಫ್ಯಾಕ್ಟರಿ ಹೆಸರು ಗೊತ್ತಿಲ್ಲ. ನಾನು ಗೇರು ಬೀಜದ ಫ್ಯಾಕ್ಟರಿಯಲಿ ಕೆಲಸ ಮಾಡುತ್ತಿದ್ದ ಬಗ್ಗೆ ಮತ್ತು ಫ್ಯಾಕ್ಟರಿಯವರು ನನಗೆ ಸಂಬಳ ಕೊಡುತ್ತಿದ್ದ ಲಿಖಿತ ದಾಖಲೆ ಇಲ್ಲ. ನನ್ನ ತಪ್ಪಿನಿಂದ ಆದ ಗಾಯಗಳನ್ನು ಉಪಯೋಗಿಸಿಕೊಂಡು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದೂರು ನೀಡಿ ಪ್ರಸ್ತುತ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು